ದಿನಾಂಕ 16-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಬಿ.ಆರ್.ಪಿ ವಕೀಲರಿಂದಃ**

6. 2020 ನೇ ಇಸವಿಯಲ್ಲಿ ನನ್ನ ತಂದೆಯಿಂದ ನನಗೆ ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂದರೆ ಸ ನಂಃ 52 ಬಂದಿರುತ್ತದೆ. ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸರ್ವೇ ನಂಬರನ್ನು ಹೊರತುಪಡಿಸಿ 2020 ನೇ ಇಸವಿಯಲ್ಲಿ ನನ್ನ ತಂದೆಯಿಂದ ನನಗೆ ಬೇರೆ ಯಾವುದೇ ಆಸ್ತಿಗಳು ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಪಂಚಾಯಿತಿ ಆಸ್ತಿಗಳು ನಮ್ಮ ತಂದೆಯಿಂದ ನನಗೆ ಯಾವಾಗ ಬಂದಿರುತ್ತವೆ ಎಂದರೆ ಯಾವುದೇ ಬಂದಿರುವುದಿಲ್ಲ. ಸುರೇಶ ಅವರ ಹೆಂಡತಿಯಾದ ನನ್ನ ತಂಗಿಗೆ ನಾವು ಪಿತ್ರಾರ್ಜಿತವಾಗಿ ಯಾವುದೇ ಆಸ್ತಿಯನ್ನು ಮಾಡಿರುವುದಿಲ್ಲ.

7. ಸ ನಂಃ 52 ನ್ನು ನನ್ನ ಗಂಡು ಮಕ್ಕಳಿಗೆ ಮಾಡಿರುತ್ತೇನೆ, ಹೆಣ್ಣು ಮಕ್ಕಳಿಗೆ ಕೊಟ್ಟಿರುವುದಿಲ್ಲ. ನನ್ನ ತಂದೆಯ ಆಸ್ತಿಯನ್ನು ನಾನು ನೇರವಾಗಿ ನನ್ನ ಮಕ್ಕಳ ಹೆಸರಿನಲ್ಲಿ ಮಾಡಿರುತ್ತೇನೆ. ಸ ನಂಃ 25 ರಲ್ಲಿ 11 ಗುಂಟೆ ನನ್ನ ಹೆಸರಿನಲ್ಲಿ ಖಾತೆ ಇರುತ್ತದೆ. ಸ ನಂಃ 52 ನ್ನು ನನ್ನ ತಂದೆಯ ಹೆಸರಿನಿಂದ ಪ್ರಮೋದ ಹಾಗೂ ರಂಗು ಅವರಿಗೆ ಮಾಡಿರುತ್ತೇನೆ. ಒಬ್ಬರಿಗೆ 1 ಎಕರೆ 17 ಗುಂಟೆ ಹಾಗೂ ಇನ್ನೊಬ್ಬರಿಗೆ 1 ಎಕರೆ 16 ಗುಂಟೆಯನ್ನು ಮಾಡಿರುತ್ತೇನೆ. ನನ್ನ 2 ನೇ ಹೆಂಡತಿಗೆ ಯಾವುದೇ ಆಸ್ತಿಯನ್ನು ಮಾಡಿರುವುದಿಲ್ಲ.

8. ನನ್ನ ತಂಗಿಯಾದ ಶಾಂತವ್ವ ಅವರ ಹೆಸರಿನಲ್ಲಿ ಇರುವ ಆಸ್ತಿಯ ಸರ್ವೇ ನಂಬರ ನನಗೆ ಗೊತ್ತಿಲ್ಲ. ಆರ್.ಟಿ.ಸಿಯಲ್ಲಿ ಶಾಂತವ್ವ ಕೋಂ ಸುರೇಶ ಅರಳೇಶ್ವರ ಎಂದು ನಮೂದಾಗಿರುತ್ತದೆ ಎಂದರೆ ಸುಳ್ಳಾಗಿ ನಮೂದಾಗಿರುತ್ತದೆ. ನನ್ನ ಹೆಸರಿನಲ್ಲಿ ಇರುವ

ಆಸ್ತಿಯನ್ನು ನನ್ನ 2 ನೇ ಹೆಂಡತಿಯ ಮಕ್ಕಳಿಗೆ ಮಾಡಿರುವುದಿಲ್ಲ. ನನ್ನ 2 ನೇ ಹೆಂಡತಿಯಿಂದ ಜನಿಸಿರುವ ಪ್ರಮೋದ ಅವರು 1999 ರಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. ರಂಗು ಅವರು 2001 ನೇ ಇಸವಿಯಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. ರಂಜಿತಾ ಅವರು 2001 ನೇ ಇಸವಿಯಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. ರಂಗು ಹಾಗೂ ರಂಜಿತಾ ಅವರು ಅವಳಿ-ಜವಳಿ ಮಕ್ಕಳು ಆಗಿರುತ್ತಾರೆ. ಪ್ರಿಯಾ ಅವರು 1997 ನೇ ಇಸವಿಯಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. 2 ನೇ ಹೆಂಡತಿ ಶಾರದಾ ಅವರನ್ನು ನಾನು ಯಾವ ವರ್ಷದಲ್ಲಿ ಮದುವೆ ಆಗಿರುತ್ತೇನೆ ಎಂದು ಗೊತ್ತಿಲ್ಲ.

9. ಮೊದಲನೇ ಹೆಂಡತಿ ಗೌರವ್ವ ಅವರು ದಿಃ 22-07-2006 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಹೆಂಡತಿಯ ಮಗಳಾದ ರೇಖಾ ಅವರು ದಿಃ 14-02-1992 ರಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. ನಾನು ಈಗ ವಾಸವಾಗಿರುವ ಗ್ರಾಮದಲ್ಲಿ ಯಾರ ಮನೆಯಲ್ಲಿ ವಾಸವಿದ್ದೇನೆ ಅದರ ಸಂಖ್ಯೆ ನನಗೆ ಗೊತ್ತಿಲ್ಲ. ಹೊಸಳ್ಳಿ ಗ್ರಾಮದಲ್ಲಿ ನಾನು ನಮ್ಮ ಮನೆಯಲ್ಲಿ ಇದ್ದೇನೆ ಅಥವಾ ಬೇರೆಯವರ ಮನೆಯಲ್ಲಿ ಇದ್ದೇನೆ ಎಂದರೆ ನಮ್ಮ ಮನೆಯಲ್ಲಿ ಇದ್ದೇನೆ. ನಮ್ಮ ಮನೆಯಲ್ಲಿ ನನ್ನ ತಂದೆ ತಾಯಿ ಇರುವುದಿಲ್ಲ. ಅವರು ಈಗ ಜೀವಂತ ಇರುವುದಿಲ್ಲ. ನನ್ನ ತಂಗಿ ನಮ್ಮ ಮನೆಯಲ್ಲಿ ವಾಸ ಇರುವುದಿಲ್ಲ, ಅವರು ಬೇರೆ ಮನೆಯಲ್ಲಿ ಇರುತ್ತಾರೆ. ಅವರು ತಮ್ಮ ಸ್ವಂತ ಮನೆಯಲ್ಲಿ ಇರುತ್ತಾರೆ. ಅವರಿಗೆ ನಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಸರ್ವೇ ನಂಬರಾಗಲೀ, ವಿಪಿಸಿ ಆಸ್ತಿಯಾಗಲೀ ಯಾವುದೇ ಹೋಗಿರುವುದಿಲ್ಲ. ನಾನು ಕಟ್ಟಿ ಕೊಟ್ಟಿರುವ ಮನೆಯಲ್ಲಿ ನನ್ನ ತಂಗಿ ವಾಸ ಇರುತ್ತಾರೆ. ಸದರಿ ಜಾಗ ನಮ್ಮ ಕುಟುಂಬದ ಆಸ್ತಿ ಆಗಿರುತ್ತದೆ. ನನ್ನ ತಂದೆಯಿಂದ ಬಂದಂತಹ ಒಟ್ಟು ಕುಟುಂಬದ ಆಸ್ತಿಗಳಲ್ಲಿ ನನ್ನ ಜೊತೆಯಲ್ಲಿ ಯಾರೂ ಜಂಟಿಯಾಗಿ ಇರುವುದಿಲ್ಲ.



(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು

ಒಪ್ಪಿರುತ್ತಾರೆ.

SD/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್ಲ.

ಸಾಕ್ಷಿದಾರರ ಸಹಿ